ಕವಿಯುತ್ತದೆ. ಮರಗಟ್ಟಿದವನಂತೆ ಕಾಣುತ್ತಾನೆ. ಸಾಕ್ಷಿಗಳು, ಪ್ರೇಕ್ಷಕರು, ಶಿಕ್ಷೆಯ ಜಾರಿಗೆ ಆದ ಸಿದ್ಧತೆಗಳು, ಆ ಕೊಠಡಿಯಲ್ಲಿ ಕಾಣುವ ಯಾವುದೂ ನಿಜವಲ್ಲ; ತನ್ನ ಭ್ರಮೆ ಎನ್ನಿಸತೊಡಗುತ್ತದೆ. ಭಯಂಕರವಾದ ಪ್ರಮಾದವೊಂದು ಸಂಭವಿಸಲಿದೆ ಎನ್ನುವ ಯೋಚನೆಯೂ ಅವನ ತಲೆಯಲ್ಲಿ ಹಾದು ಹೋಗುತ್ತದೆ. ತನ್ನನ್ನು ಯಾಕೆ ಕುರ್ಚಿಗೆ ಕಟ್ಟಲಾಗುತ್ತಿದೆ? ತನ್ನ ಯಾವ ಅಪರಾಧಕ್ಕೆಂದು? ಅವನು ಯೋಚಿಸತೊಡಗುತ್ತಾನೆ. ಮುಂದಿನ ಕ್ಷಣದಲ್ಲಿ ಹಗ್ಗವನ್ನು ಬಿಗಿಯುತ್ತಿರುವಾಗ ಅವನಿಗೆ ಒಂದು ದೃಶ್ಯ ಕಾಣಿಸುತ್ತದೆ. ಆಗ ಅವನು ಕನಸಿಗೆ ಜಾರಿದ್ದ. ಅಲ್ಲಿ ಒಂದು ಸಾಧಾರಣವಾದ ಹಳ್ಳಿಯ ಗುಡಿಸಲು. ಸೂರ್ಯನ ಕೃಪೆ, ಒಳ್ಳೆಯ ಬೆಳಕಿದೆ. ಬೆಳಕಿಗೆ ಕಟ್ಟಿದ ಗೂಡಿನಂತೆ ಬಳ್ಳಿಗಳಿಂದ ಮುಚ್ಚಿದ ಪೊದೆ. ಅಲ್ಲಿ ಒಬ್ಬಾಕೆ ಕಾಣಿಸುತ್ತಾಳೆ, ಆಕೆಯ ಸಂಗಡ ಮಗುವಿದೆ. ಮರ್ರೆ ಇಬ್ಬರನ್ನೂ ಮಾತಾಡಿಸುತ್ತಾನೆ. ಆಗ ಅವನಿಗೆ ಥಟ್ಟನೆ ಆಕೆ ತನ್ನ ಹೆಂಡತಿ, ಆ ಮಗು ತನ್ನದು ಎಂದು ತಿಳಿಯುತ್ತದೆ. ಆ ಗುಡಿಸಲು ತನ್ನ ಮನೆ. ಹಾಗಾದರೆ ಈಗ ನಡೆಯುತ್ತಿರುವುದು ಪ್ರಮಾದವೆ ಸರಿ. ಯಾರೋ ಸರಿಪಡಿಸಲಾಗದ ದೊಡ್ಡ ಪ್ರಮಾದವನ್ನೇ ಮಾಡಿದ್ದಾರೆ. ಹತ್ಯೆಯ ಆಪಾದನೆ, ವಿಚಾರಣೆ, ತೀರ್ಪು, ಮರಣದಂಡನೆ, ಎಲ್ಲವೂ ಬರಿ ಕನಸು. ಮರ್ರೆ ಹೆಂಡತಿಯನ್ನು ಆಲಂಗಿಸಿ ಮಗುವನ್ನು ಮುದ್ದಾಡುತ್ತಾನೆ. ಹೌದು, ಇದರಲ್ಲೇ ನಿಜವಾದ ಸಂತೋಷವಿದೆ, ಎಂದು ಎಣಿಸುತ್ತಿರುವಾಗಲೆ ಜೈಲಿನ ಅಧಿಕಾರಿಯ ಸೂಚನೆಯಂತೆ ಕುರ್ಚಿಯ ಸ್ವಿಚ್ ಹಾಕಲಾಗುತ್ತದೆ.

ಮರ್ರೆ ತನ್ನದಲ್ಲದ ಕನಸನ್ನು ಕಂಡಿದ್ದ.'

## ಓ. ಹೆನ್ರಿ

ಓ. ಹೆನ್ರಿ ಹೆಸರಿನಿಂದ ಚಿರಪರಿಚಿತನಾಗಿರುವ ಅಮೆರಿಕದ ಲೇಖಕ ವಿಲಿಯಂ ಸಿಡ್ನಿ ಪೋರ್ಟರ್ ತನ್ನ ಹಾಸ್ಯ ಮಿಶ್ರಿತ ವಿಲಕ್ಷಣ ತಿರುವು ಕೊಡುವ ಕತೆಗಳಿಗೆ ಪ್ರಸಿದ್ಧ. ಔಷಧ ರಸಾಯನ ಶಾಸ್ತ್ರ ಕಲಿತ ಅವನು ಬ್ಯಾಂಕ್ ನೌಕರಿಗೆ ಸೇರಿ ಬ್ಯಾಂಕಿನಿಂದ ದುಡ್ಡು ಲಪಟಾಯಿಸಿರುವ ಆರೋಪ ಹೊತ್ತು ಜೈಲು ಸೇರುತ್ತಾನೆ. ತನ್ನ ಹೆಸರು ಬದಲಾಯಿಸಿ ಜೈಲಿನಲ್ಲಿ ಸಣ್ಣ ಕತೆಗಳನ್ನು ಬರೆಯಲು ತೊಡಗುತ್ತಾನೆ. ಮುಂದೆ ಅದೇ ಹೆಸರಿನಿಂದ ಪ್ರಖ್ಯಾತನಾಗುತ್ತಾನೆ.

## ಆರ್.ಡಿ. ಹೆಗಡೆ ಆಲ್ಮನೆ

ಸಂಸ್ಕೃತ ಮತ್ತು ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರ. ಪ್ರಾಚಾರ್ಯರಾಗಿ ನಿವೃತ್ತಿಯ ನಂತರ ಸಿರ್ಸಿ ಸಮೀಪದ ಹಳ್ಳಿಯಲ್ಲಿ ಕೃಷಿಕರಾಗಿದ್ದಾರೆ. ಭಾರತೀಯ ತತ್ವಶಾಸ್ತ್ರ ಮತ್ತು ಸಾಹಿತ್ಯದಲ್ಲಿ ಆಸಕ್ತಿ. ಹವ್ಯಾಸಿ ಬರಹಗಾರ. ಕಾದಂಬರಿ, ಕಥಾಸಂಗ್ರಹ, ಅಂಕಣಬರಹ, ಸಾಹಿತ್ಯವಿಮರ್ಶೆಯ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. 'ಭಗವದ್ಗೀತೆ, ಅಪರಾಧ ಮತ್ತು ಶಿಕ್ಷೆ', 'ಉಪನಿಷತ್ತುಗಳ ಅರ್ಥಲೋಕ' ಸೇರಿದಂತೆ ಸುಮಾರು ಹದಿನೈದು ಪುಸ್ತಕಗಳ ಪ್ರಕಟಣೆ. ಇತ್ತೀಚೆಗೆ ಪ್ರಕಟವಾದ ಪುಸ್ತಕಗಳು: 'ಝೆನ್ ಮಹಾಯಾನ'. ಮತ್ತು ಜಾರ್ಜ್ ಥಾಮ್ಸನ್‌ನ 'ಹ್ಯುಮನ್ ಎಸೆನ್ಸ್'ನ ಅನುವಾದ 'ಮಾನವತ್ವದ ಸಾರ'.